## 1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ

**ದಿನಾಂಕ 8 ನೇ ಜೂನ್ 2026**

**ಸಿ.ಸಿ ಸಂಖ್ಯೆ : 1036/2026**

**ಪಿರ್ಯಾದಿ** : ರಾಜ್ಯದ ಪರವಾಗಿ ತಲಕಾಡು ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು** : ಮುಜಾಹಿದ್ ಪಾಷ ಬಿನ್ ಲೇಟ್ ಅಬ್ದುಲ್ ಖಾದರ್, 50 ವರ್ಷ.
ಹಳೆ ನರಿಪುರ ಗ್ರಾಮ, ಸೋಸಲೆ ಹೋಬಳಿ, ಟಿ.ನರಸೀಪುರ ತಾಲ್ಲೂಕು.

**ಆಪಾದನೆ**

**ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆರೋಪಣೆ ಏನೆಂದರೆ**

ದಿನಾಂಕಃ 24/11/2025 ರಂದು 15.30 ಗಂಟೆ ಸಮಯದಲ್ಲಿ ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಟಿ.ನರಸೀಪುರ-ಪುರಿಗಾಲಿ ಮುಖ್ಯ ರಸ್ತೆಯ ಹಳೆ ನರೀಪುರದ ಬಸ್ ನಿಲ್ದಾಣದ ಬಳಿ, ಚಾಸಾ.1 ರವರು ಕೆಎ-05-ಕೆಕೆ-5961 ರ ಮೋಟಾರು ಸೈಕಲ್ ನಲ್ಲಿ ಪುರಿಗಾಲಿ ರಸ್ತೆ ಕಡೆಯಿಂದ ದೊಡ್ಡೆಬಾಗಿಲು ರಸ್ತೆ ಕಡೆಗೆ ಹೋಗುತ್ತಿದ್ದಾಗ, ಮೇಲ್ಕಂಡ ಆರೋಪಿಯಾದ ನೀವು ಕೆಎ-55-ಡಬ್ಲ್ಯೂ-1372 ರ ಮೋಟಾರು ಸೈಕಲ್ ಅನ್ನು ಹಳ ನರೀಪುರ ಗ್ರಾಮದ ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಚಾಸಾ.1 ರವರ ಮೋಟಾರು ಸೈಕಲ್ ಗೆ ಡಿಕ್ಕಿ ಮಾಡಿ ಅಪಘಾತವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ.1 ರವರ ವಾಹನಕ್ಕೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ.1 ರವರ ಎಡಭುಜದ ಮೂಳೆ, ಎಡಭುಜ ಮತ್ತು ತಲೆಯ ಬಲಭಾಗ, ತಲೆಯ ಎಡಭಾಗಕ್ಕೆ ಸಾಮಾನ್ಯ ಸ್ವರೂಪದ ಪೆಟ್ಟಾಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 125(**a**) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ.1 ರವರ ವಾಹನಕ್ಕೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ.1 ರವರ ಎಡಭುಜದ ಮೂಳೆ, ಎಡಭುಜ ಮತ್ತು ತಲೆಯ ಬಲಭಾಗ, ತಲೆಯ ಎಡಭಾಗಕ್ಕೆ ತೀವ್ರ ಸ್ವರೂಪದ ಪೆಟ್ಟಾಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 125(**b**) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

**ಪ್ರಶ್ನೆ**: 1: ಆರೋಪಣೆ ಓದಿ ಹೇಳಿದುದು ಅರ್ಥವಾಯಿತೇ?
**ಉತ್ತರ** : ಅರ್ಥವಾಯಿತು

**ಪ್ರಶ್ನೆ**: 2: ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಬೇಕಾ ?
**ಉತ್ತರ** : ಶಿಕ್ಷೆಗೆ ಒಪ್ಪಿರುತ್ತೇನೆ

ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಂತ ಬರಹದಲ್ಲಿ ದಾಖಲೆ ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಓ ಹೇ ಕೇ ಸ ಇ ಓ

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರದನ್ಯಾದಂ., ಟಿ.ನರಸೀಪುರ.**

ಪ್ರಕರಣವನ್ನು ಕರೆಯಲಾಯಿತು. ಆರೋಪಿತರು ಹಾಜರಿದ್ದು ದೋಷಾರೋಪಣಾ ಪತ್ರವನ್ನು ಒದಗಿಸಲಾಯಿತು. ಆರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಗಿ, ಅರ್ಥೈಸಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡಿರುಸತ್ತಾರೆ. ಅವರ ತಪ್ಪೊಪ್ಪಿಗೆಯು ಸ್ವ–ಇಚ್ಛೆಯಿಂದ ಕೂಡಿದ್ದೆಂದು ಮನವರಿಕೆಯಾಗಿದೆ.

ಆದ್ದರಿಂದ ಭಾರತೀಯ ನ್ಯಾಯ ಸಂಹಿತೆ ಕಲಂ.281 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ 1 ನೇ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.1,000/– ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.125(**a**)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ 1 ನೇ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.2,500/– ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.125(**b**)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ 1 ನೇ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.5,000/– ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

ಪಿ ಎಫ್ ಸಂಖ್ಯೆ 122/2025 ಕ್ಕೆ ಸಂಬಂಧಿಸಿದಂತೆ ಐಟಂ ನಂ.1 ನ್ನು ಅರ್ಜಿದಾರರ ವಶಕ್ಕೆ ನೀಡಲಾಗಿರುತ್ತದೆ.

Call before lok–adalath by 11/07/2026.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**